**ದಿನಾಂಕಃ 28.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮಗ ಶಿವಗಂಗ ಪ್ರೌಢ ಶಾಲೆಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದನು. ಆತನಿಗೆ 13 ವರ್ಷ ಆಗಿತ್ತು. ನನ್ನ ಮನೆಯಿಂದ ಮಗನ ಶಾಲೆಗೆ ಸುಮಾರು ಎರಡೂವರೆ ಕಿಲೋ ಮೀಟರ್ ಆಗುತ್ತದೆ. ನನ್ನ ಮಗ ನಡೆದುಕೊಂಡು ಶಾಲೆಗೆ ಹೋಗುತ್ತಿದ್ದನು. ಧನುಷ್ ಮತ್ತು ನಿತಿನ್ ಎಂಬುವವರು ನನ್ನ ಮಗ ಹೋಗತ್ತಿದ್ದ ಶಾಲೆಯಲ್ಲಿಯೇ ವ್ಯಾಸಂಗ ಮಾಡುತ್ತಿದ್ದರು. ಶಾಲೆ ಸಂಜೆ 4 ಗಂಟೆಗೆ ಬಿಡುತ್ತದೆ. ಅಪಘಾತದ ಬಗ್ಗೆ ಸಾರ್ವಜನಿಕರು ಸಂಜೆ 4.30 ಗಂಟೆಯ ಸಮಯದಲ್ಲಿ ನನಗೆ ಮಾಹಿತಿ ನೀಡಿದರು. ಅಪಘಾತದ ಬಗ್ಗೆ ನಾಗರಾಜು ಎಂಬುವವರು ದೂರನ್ನು ನೀಡಿರುತ್ತಾರೆ. ನಾಗರಾಜು ಎಂಬುವವರು ಬೈಕಿನ ಮಧ್ಯದಲ್ಲಿ ಕುಳಿತಿದ್ದ ಧನುಷ್ ರವರ ತಂದೆ ಎಂದರೆ ಸರಿ. ದೂರಿನ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ವಾಹನವನ್ನು ನಿತಿನ್ ಚಾಲನೆ ಮಾಡುತ್ತಿದ್ದನು. ನಿತಿನ್ ಚಾಲನೆ ಮಾಡುತ್ತಿದ್ದ ಹಿಂಭಾಗದಲ್ಲಿ ಧನುಷ್ ಇದ್ದು, ಆತನ ಹಿಂಭಾಗದಲ್ಲಿ ನನ್ನ ಮಗ ಕುಳಿತಿದ್ದನು ಎಂದರೆ ಸರಿ. ನಿತಿನ್ ಮತ್ತು ಧನುಷ್ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆ ದಿನ ಬೈಕಿನಲ್ಲಿದ್ದ ಮೂವರೂ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತ ಹೇಗೆ ಸಂಭವಿಸಿತು ಎಂದು ಸಾರ್ವಜನಿಕರ ಮೂಲಕ ತಿಳಿದು ಬಂದಿರುತ್ತದೆ. ನಾಗರಾಜುರವರಿಗೆ ಅಪಘಾತ ಹೇಗೆ ಸಂಭವಿಸಿತು ಎಂದು ಗೊತ್ತಿಲ್ಲ ಮತ್ತು ಅಪಘಾತವನ್ನು ಕಣ್ಣಾರೆ ನೋಡಿಲ್ಲ, ಆದರೆ ಗ್ರಾಮಸ್ಥರಿಂದ ತಿಳಿದುಕೊಂಡಿರುತ್ತಾರೆ.

ನಿತಿನ್ ಚಾಲನೆ ಮಾಡುತ್ತಿದ್ದ ಬೈಕು ಯಾರಿಗೆ ಸೇರಿತ್ತು ಎಂದು ನಾನು ತಿಳಿದುಕೊಂಡಿಲ್ಲ. ನಿಪಿ 9 ಅನ್ನು ವಾಹನದ ಮಾಲೀಕರಾದ ಕೆಂಪಮ್ಮರವರ ವಿರುದ್ಧವೂ ಸಹ ಸಲ್ಲಿಸಲಾಗಿದೆ ಎಂದರೆ ಸರಿ. ಬೈಕಿನಲ್ಲಿ ಹೋಗುತ್ತಿದ್ದ ಮೂವರೂ ಸಹ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ವಾಹನ ಚಾಲನೆ ಮಾಡುತ್ತಿದ್ದ ನಿತಿನ್ ರವರ ವಿರುದ್ಧವೂ ಸಹ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತದ ಸ್ಥಳದ ಬಗ್ಗೆ ನನಗೆ ಪರಿಚಯ ಇದೆ. ಅಪಘಾತವಾದ ಸ್ಥಳದಿಂದ ಮಗನ ಶಾಲೆ ಸುಮಾರು 1 ಕೀ.ಮಿ ಅಂತರದಲ್ಲಿದೆ. 4 ರಸ್ತೆ ಸೇರುವ ಮಾರ್ಗದ ಮಧ್ಯಭಾಗದಲ್ಲಿ ಅಪಘಾತ ಸಂಭವಿಸಿದೆ ಎಂದು ನಿಪಿ 5 ರಲ್ಲಿ ತೋರಿಸಲಾಗಿದೆ ಎಂದರೆ ಸಾಕ್ಷಿಯು ಮಧ್ಯದಲ್ಲಿ ಆಗಿರುವುದಿಲ್ಲ, ರಸ್ತೆಯ ಬದಿಯಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಬೈಕು ಜಿಂಕ್ ಶೀಟ್ ಕಾಂಪೌಂಡ್ ಗೆ ಅಪ್ಪಳಿಸಿದ ಪರಿಣಾಮ ಗಾಯಗಳು ಆಗಿರುತ್ತದೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಬೈಕಿನಲ್ಲಿ ಮೂವರು ಹೋಗುತ್ತಿದ್ದು, ನಿತಿನ್ ಗೆ ಚಾಲನಾ ಪರವಾನಗಿ ಇಲ್ಲದ ಪರಿಣಾಮ ಆತನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ವೈದ್ಯಕೀಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಗಳಲ್ಲಿ ನಿತಿನ್ ಅತೀವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದ ಬಗ್ಗೆ ಉಲ್ಲೇಖ ಇರುವ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾಗರಾಜುರವರು ಪೊಲೀಸರೊಂದಿಗೆ ಶಾಮೀಲಾಗಿ ಆಪಾದಿತ ವಾಹನದ ಚಾಲಕನ ವಿರುದ್ಧ ಸುಳ್ಳು

ದೂರು ನೀಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**